ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 1-10.
©*IIMRD*, Mysuru

IIMRD JOURNALS
www.iimrd.com

# ಉಡುಪಿ ಪರಿಸರದ ದೇವಾಲಯಗಳ ಜೀರ್ಣೋದ್ಧಾರ – ಪುರಾತತ್ತ್ವ ಪುರಾವೆಗಳು

**ಡಾ. ಜಯರಾಮ ಶೆಟ್ಟಿಗಾರ್**
ಮುಖ್ಯಸ್ಥರು ಇತಿಹಾಸ ವಿಭಾಗ, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ, ಕರ್ನಾಟಕ.

**ಸಾರಾಂಶ: (Abstract)**

*ಪುರಾತತ್ತ್ವ ಆಧಾರದ ಮೇಲೆ ಮಧ್ಯಯುಗೀನ ಕಾಲದಲ್ಲಿ ಉಡುಪಿ ಪರಿಸರದ ದೇವಾಲಯಗಳ ಜೀರ್ಣೋದ್ಧಾರ ಕುರಿತಂತೆ ಮಾಹಿತಿಯನ್ನು ಸಂಗ್ರಹಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಉಡುಪಿ ಪರಿಸರದ ಅನೇಕ ಶಾಸನಗಳು ದೇವಾಲಯದ ಜೀರ್ಣೋದ್ಧಾರ, ದಾನಿಗಳ ಹೆಸರುಗಳು, ನವೀಕರಣದ ದಿನಾಂಕಗಳು ಮತ್ತು ದೇವಾಲಯದ ರಚನೆಗೆ ಮಾಡಿದ ಸುಧಾರಣೆಗಳ ವಿವರಗಳನ್ನು ಉಲ್ಲೇಖಿಸುತ್ತವೆ. ಉಡುಪಿಯ ಶ್ರೀಕೃಷ್ಣ ಮಠದಲ್ಲಿರುವ ಶಾಸನಗಳು ಇತಿಹಾಸದುದ್ದಕ್ಕೂ ವಿವಿಧ ಆಡಳಿತಗಾರರು ಮತ್ತು ಸ್ಥಳೀಯ ನಾಯಕರು ಪ್ರಾಯೋಜಿಸಿದ ನವೀಕರಣಗಳ ಪುರಾವೆಗಳನ್ನು ಒದಗಿಸುತ್ತವೆ. ಪುರಾತತ್ತ್ವಶಾಸ್ತ್ರದ ಸಮೀಕ್ಷೆಗಳು ಮತ್ತು ಅಧ್ಯಯನಗಳು ಉಡುಪಿಯಲ್ಲಿನ ದೇವಾಲಯದ ನವೀಕರಣದ ಸುತ್ತಲಿನ ಐತಿಹಾಸಿಕ ಸಂದರ್ಭವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.*

**ಮುಖ್ಯಪದಗಳು (Keywords):** ಚಾಲುಕ್ಯ ಶೈಲಿ, ಪುರಾತತ್ತ್ವ ಪುರಾವೆಗಳು, ಶಾಸನಗಳು, ಉಡುಪಿ ಪರಿಸರದ ದೇವಾಲಯಗಳು.

## ಪೀಠಿಕೆ

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳ ಪಾತ್ರ ಮಹತ್ವದ್ದಾಗಿದೆ. ಭಾರತದ ಅವಿಭಾಜ್ಯ ಅಂಗವಾಗಿದ್ದ ಅಫ್ಘಾನಿಸ್ತಾನದಲ್ಲಿ ಕುಶಾಣ ದೊರೆ ಕನಿಷ್ಕ ರಾಜನ ಕಾಲಕ್ಕೆ ಸೇರಿದ ಅತೀ ಪ್ರಾಚೀನ ದೇವಾಲಯದ ಅವಶೇಷವು ಪತ್ತೆಯಾಗಿದ್ದು ಅದು ಭಾರತ ದೇವಾಲಯದ ಇತಿಹಾಸದ ಪ್ರಾಚೀನತೆ ಸಾಕ್ಷಿಯಾಗಿದೆ. ಆರಂಭಿಕ ಕಾಲದಲ್ಲಿ ದೇವಾಲಯಗಳನ್ನು ಸ್ಥಳೀಯವಾಗಿ ಲಭ್ಯವಾಗಿರುವ ವಸ್ತುಗಳಿಂದ ನಿರ್ಮಿಸಲಾಗಿತ್ತು, ನಂತರದ ಕಾಲದಲ್ಲಿ ಶಿಲಾಮಯ ದೇವಾಲಯಗಳನ್ನು ನಿರ್ಮಿಸಲಾಯಿತು. ಭಾರತದಲ್ಲಿ ಇನ್ನೊಂದು ಅತೀ ಪ್ರಾಚೀನ ದೇವಾಲಯದ ಅವಶೇಷವು ಮಧ್ಯಪ್ರದೇಶದ ಬೆಹರೂತ್‌ಲ್ಲಿ ಕಂಡುಬಂದಿದೆ. ಅದರ ಆಧಾರದ ಮೇಲೆ, ಕ್ರಿ.ಶ.3ನೇ ಶತಮಾನದಲ್ಲಿ ಭಾರತದಲ್ಲಿ ದೇವಾಲಯಗಳು ನಿರ್ಮಾಣಗೊಂಡವು ಎಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಭಾರತದಲ್ಲಿ ಪಲ್ಲವರ ಆಳ್ವಿಕೆ ಕಾಲದಲ್ಲಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಲಾಯಿತು. ದಕ್ಷಿಣ ಭಾರತದ ಅತಿ ಪ್ರಾಚೀನ ದೇವಾಲಯಗಳು ಕರ್ನಾಟಕದ ಐಹೊಳೆಯಲ್ಲಿ ಕಂಡುಬಂದಿದೆ. ಐಹೊಳೆ ಪ್ರಾರಂಭಗೊಂಡ ದೇವಾಲಯಗಳ ನಿರ್ಮಾಣ ಕಾರ್ಯ ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ ಉತ್ತರ ಭಾರತದಲ್ಲಿಯೂ ಕೂಡ ಮುಂದುವರಿಯಿತು.

*Please cite this article as:* *ಜಯರಾಮ ಶೆಟ್ಟಿಗಾರ್.* (2024). ಉಡುಪಿ ಪರಿಸರದ ದೇವಾಲಯಗಳ ಜೀರ್ಣೋದ್ಧಾರ – ಪುರಾತತ್ತ್ವ ಪುರಾವೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(5). ಪು.ಸಂ.* 1–10

ಭಾರತದಲ್ಲಿ ಮಾತ್ರವಲ್ಲದೆ ಆಗ್ನೇಯ ಏಷ್ಯಾದಲ್ಲಿ ಕೂಡ ದೇವಾಲಯಗಳು ನಿರ್ಮಾಣಗೊಂಡವು. ಕರ್ನಾಟಕದ ಐಹೊಳೆಯನ್ನು ಭಾರತದ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು ಎಂದು ಕರೆಯಲಾಗಿದೆ. ದೇವಾಲಯಗಳ ಕಾರ್ಯವ್ಯಾಪ್ತಿ ವೈವಿಧ್ಯಮಯವಾಗಿದ್ದು ಅದು ಕೇವಲ ಪೂಜಾ ಮತ್ತು ಧಾರ್ಮಿಕ ಕಾರ್ಯಗಳಿಗೆ ಮಾತ್ರ ಸೀಮಿತವಾಗಿರದೆ, ವಿದ್ಯಾಭ್ಯಾಸ ಅನ್ನದಾನ, ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನಾಟಕ, ನ್ಯಾಯ ತೀರ್ಮಾನ, ಆರ್ಥಿಕ ಚಟುವಟಿಕೆ, ಸಮಾಜಿಕ ಚಟುವಟಿಕೆ ಹೀಗೆ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಈ ಎಲ್ಲಾ ಕಾರ್ಯಗಳ ಮೂಲಕ ದೇವಸ್ಥಾನವು ಒಬ್ಬ ವ್ಯಕ್ತಿಯ ಮತ್ತು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸಿಕೊಂಡು ಬಂದಿರುತ್ತದೆ. ಈ ರೀತಿಯಲ್ಲಿ ದೇವಾಲಯಗಳು ಒಂದು ಪ್ರದೇಶದ ಸಾಮಾಜಿಕ ಜೀವನದ ಕೇಂದ್ರವಾಗಿದ್ದವು. ದೇವಾಲಯ ನಿರ್ಮಾಣ ಕಾರ್ಯವು ಒಂದು ಪುಣ್ಯ ಕೆಲಸವೆಂದು ಪರಿಗಣಿಸಲಾಗಿದೆ. ದೇವಾಲಯಗಳ ನಿರ್ಮಾಣದಲ್ಲಿ ರಾಜರುಗಳು ಮಾತ್ರವಲ್ಲದೆ ಪ್ರಜೆಗಳು ಕೂಡ ಮಹತ್ವದ ಕೊಡುಗೆಯನ್ನು ನೀಡಿರುತ್ತಾರೆ. ಅನೇಕ ಶಿಲಾ ಶಾಸನಗಳಲ್ಲಿ ಉಲ್ಲೇಖಿಸಿದಂತೆ ಒಬ್ಬ ವ್ಯಕ್ತಿಯು ತಾನು ಧರ್ಮ ಮಾರ್ಗದಿಂದ ಸಂಪಾದಿಸಿದ ಹಣದಲ್ಲಿ ಸ್ವಲ್ಪವಾದರೂ ದೇವತಾ ಕಾರ್ಯಗಳಿಗೆ ಬಳಸಬೇಕೆಂದಿದೆ. ದೇವಾಲಯಗಳ ನಿರ್ಮಾಣಕ್ಕೆ ವ್ಯಯಿಸಿದಷ್ಟೇ ಹಣವನ್ನು ಅವುಗಳ ಸಂರಕ್ಷಣೆ ಮತ್ತು ಪುನರ್ ನಿರ್ಮಾಣಕ್ಕೆ ವ್ಯಯಿಸಬೇಕಾಗುತ್ತದೆ. ದೇವಾಲಯದ ನಿರ್ಮಾಣ ಎಷ್ಟು ಮುಖ್ಯವೋ ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕೆಲಸಗಳು ಅಷ್ಟೇ ಮುಖ್ಯವಾಗಿರುತ್ತದೆ. ದೇವಾಲಯದ ನಿರ್ಮಾಣವನ್ನು ಒಬ್ಬ ರಾಜ, ರಾಣಿಯರು, ಅಧಿಕಾರಿಗಳು ಮತ್ತು ವ್ಯಾಪಾರಿಗಳು ನೆರವೇರಿಸಿದರೂ ಕೂಡ ನಂತರ ಅವುಗಳ ರಕ್ಷಣೆಯ ಜವಾಬ್ದಾರಿಯು ಆ ಊರಿನ ಜನರದ್ದಾಗಿತ್ತು. ವಿವಿಧ ರೀತಿಯ ಆಂತರಿಕ ಮತ್ತು ಬಾಹ್ಯ ಕಾರಣಗಳಿಂದಾಗಿ ದೇವಾಲಯಗಳು ಹಾನಿಗೊಂಡಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಈ ರೀತಿ ಹಾನಿಗೊಂಡ ಅಥವಾ ನಾಶಗೊಂಡ ದೇವಾಲಯಗಳನ್ನು ಪುನಃನಿರ್ಮಿಸುವುದು ಕೂಡ ಅಷ್ಟೇ ಮಹತ್ವದ ಕಾರ್ಯವಾಗಿತ್ತು. ದೇವಾಲಯಗಳ ನಿರ್ಮಾಣ ಕಾರ್ಯ ಎಷ್ಟು ಪುಣ್ಯವೆಂದು ಭಾವಿಸಲಾಗಿತ್ತೋ ಅವುಗಳ ಜೀರ್ಣೋದ್ಧಾರ ಕಾರ್ಯವು ಅಷ್ಟೇ ಪುಣ್ಯವೆಂದು ಪರಿಗಣಿಸಲಾಗಿದೆ. ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನೇಕ ಕಾರಣಗಳು ಕಂಡುಬರುತ್ತವೆ. ದೇವಾಲಯವು ಜೀರ್ಣಗೊಂಡಿರುವುದು, ಹಾನಿಗೊಂಡಿರುವದಕ್ಕಾಗಿ ಜೀರ್ಣೋದ್ಧಾರ ಮಾಡಿರುವುದು ಮಾತ್ರವಲ್ಲದೆ, ದೇವಾಲಯವನ್ನು ವಿಸ್ತರಿಸುವುದು, ಸುಂದರಗೊಳಿದುವುದು ಅಥವಾ ಹೆಚ್ಚು ಭವ್ಯಗೊಳಿಸುವುದು ಅಥವಾ ದಾನಿಯು ಆತನಿಗೆ ಅಥವಾ ಆತನ ಕುಟುಂದವರಿಗೆ ಪುಣ್ಯ ಸಿಗಲೆಂದು, ಪಿತೃಗಳಿಗೆ ಮೋಕ್ಷ ಪ್ರಾಪ್ತಿಯಾಗಲೆಂದು, ಕೂಡ ಅದರ ಜೀರ್ಣೋದ್ಧಾರಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ. ಯಾವ ರೀತಿಯಲ್ಲಿ ಕೆಲವೊಂದು ದೇವಾಲಯಗಳ ನಿರ್ಮಾಣದ ಘಟನೆಯನ್ನು ದಾಖಲಾಗಿದೆಯೋ, ಅದೇ ರೀತಿಯಲ್ಲಿ ದೇವಾಲಯಗಳ ಸಂರಕ್ಷಣೆ ಮತ್ತು ಪುನರ್‌ನಿರ್ಮಾಣ ಅಥವಾ ಜೀರ್ಣೋದ್ಧಾರ ಕಾರ್ಯಗಳು ಕೂಡ ದಾಖಲೆಗೊಂಡಿವೆ. ದೇವಾಲಯಗಳ ನಿರ್ಮಾಣ ಕಾರ್ಯಕ್ಕೆ ಸಂಬಂದಿಸಿದಂತೆ ಪುರಾತತ್ವ ಆಧಾರಗಳು ಮಾತ್ರವಲ್ಲದೇ ಸಾಹಿತ್ಯ ಆಧಾರಗಳು ಮತ್ತು ಮೌಖಿಕ ಪರಂಪರೆಗಳು ಕೂಡ ಲಭ್ಯವಾಗಿವೆ. ಅದೇ ರೀತಿಯಲ್ಲಿ ದೇವಾಲಯಗಳ ನವೀಕರಣ ಮತ್ತು ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಕೂಡ ಹಲವೆಡೆ ಪುರಾತತ್ವ ಆಧಾರಗಳು ಸಾಹಿತ್ಯ ಆಧಾರಗಳು ಮತ್ತು ಮೌಖಿಕ ಪರಂಪರೆಗಳು ಮಾಹಿತಿಯನ್ನು

ಒದಗಿಸುತ್ತದೆ. ದೇವಾಲಯಗಳ ಅಧ್ಯಯನಕ್ಕೆ ಪುರಾತತ್ವ ಆಧಾರಗಳು ಮತ್ತು ಸಾಹಿತ್ಯ ಅಧಾಗಳು ಮುಖ್ಯವಾಗಿವೆ. ಪುರಾತತ್ವ ಆಧಾರಗಳಲ್ಲಿ ಶಾಸನಗಳು, ನಾಣ್ಯಗಳು, ಸ್ಮಾರಕಗಳು ಬಹಳ ಮುಖ್ಯವಾಗಿವೆ. ಶಾಸನಗಳು ಪುರಾತತ್ತ್ವಶಾಸ್ತ್ರದ ಮೂಲಗಳ ಪ್ರಮುಖ ಭಾಗವಾಗಿದೆ. ಅವುಗಳನ್ನು ಅತ್ಯಂತ ವಿಶ್ವಾಸಾರ್ಹ ಮೂಲ ಎಂದು ಪರಿಗಣಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಉಡುಪಿ ಪರಿಸರದ ದೇವಾಲಯಗಳ ಜೀರ್ಣೋದ್ಧಾರ – ಪುರಾತತ್ತ್ವ ಆಧಾರಗಳು ಎನ್ನುವ ಲೇಖನಕ್ಕೆ ಶಾಸನಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ.

ಭಾರತದ ಮಹತ್ವದ ಯಾತ್ರಾ ಸ್ಥಳಗಳಲ್ಲಿ ಒಂದಾದ ಉಡುಪಿಯು ಅನೇಕ ಪ್ರಾಚೀನ ದೇವಾಲಯಗಳನ್ನು ಹೊಂದಿದ್ದು ಅವುಗಳ ನವೀಕರಣಗಳು ಮತ್ತು ಪುನರ್ನಿರ್ಮಾಣಗಳಿಗೆ ಸಂಬಂದಿಸಿದ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಉಡುಪಿಯ ಅನೇಕ ಶಾಸನಗಳು ಆ ಪ್ರದೇಶದ ದೇವಾಲಯಗಳ ಜೀರ್ಣೋದ್ಧಾರದ ಕುರಿತು ಮಾಹಿತಿಯನ್ನು ನೀಡುತ್ತವೆ ಅಲ್ಲದೆ ಅದಕ್ಕೆ ಸಂಬಂದಿಸಿದಂತೆ ಇತರ ಮಾಹಿತಿಗಳಾದ ದಾನಿಗಳ ಹೆಸರುಗಳು, ನವೀಕರಣದ ದಿನಾಂಕಗಳು ಮತ್ತು ದೇವಾಲಯದ ರಚನೆಗೆ ಮಾಡಿದ ಸುಧಾರಣೆಗಳ ವಿವರಗಳನ್ನು ಉಲ್ಲೇಖಿಸುತ್ತವೆ. ಇದು ಆ ಕಾಲದ ಉಡುಪಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಮೌಲ್ಯಯುತ ಒಳನೋಟಗಳನ್ನು ಒದಗಿಸುತ್ತದೆ. ಅಲ್ಲಿನ ಕೆಲವು ಶಿಲಾ ಶಾಸನಗಳು ಅಲ್ಲಿನ ದೇವಾಲಯಗಳ ನವೀಕರಣದ ಪುರಾವೆಗಳನ್ನು ಒದಗಿಸುತ್ತವೆ ಮತ್ತು ಪ್ರಭುಗಳು ಮತ್ತು ಪ್ರಜೆಗಳು ದೇವಾಲಯಗಳ ನವೀಕರಣಕ್ಕೆ ನೀಡಿದ ಪ್ರೋತ್ಸಾಹ, ದಿನಾಂಕಗಳು ಮತ್ತು ಉದ್ದೇಶಗಳನ್ನು ವಿವರಿಸುತ್ತದೆ.

ಉಡುಪಿಯ ದೇವಾಲಯಗಳು, ಮಠಗಳು, ಗುಡಿಗಳು ಕರ್ನಾಟಕದ ಇತರ ಭಾಗಗಳ ಸ್ಮಾರಕಗಳಿಂದ ತೀರಾ ಭಿನ್ನವಾಗಿದೆ. ಅವುಗಳ ಮಾಡು ಪ್ರಾರಂಭದಲ್ಲಿ ಮುಳಿಹುಲ್ಲಿನಿಂದ ಹೊದಿಸಲಾಗಿತ್ತು. ನಂತರದ ಕಾಲದಲ್ಲಿ ಹಂಚಿನ ಹೊದಿಕೆ, ಶಿಲೆಯ ಹೊದಿಕೆ ಹಾಗೂ ತಾಮ್ರದ ಹೊದಿಕೆಗಳಿಂದ ನವೀಕರಿಸಲಾಗಿದೆ. ಇತ್ತೀಚೆಗಷ್ಟೇ ಅಲ್ಲಿನ ದೇವಾಲಯಗಳಲ್ಲಿ ಗೋಪುರಗಳನ್ನು ನಿರ್ಮಿಸಲಾಗುತ್ತಿದೆ. ಈ ಪ್ರದೇಶದಲ್ಲಿ ದೇವಾಲಯಗಳನ್ನು ಕುಟುಂಬದ ದೇವಾಲಯಗಳು, ಜಾತಿ ಅಥವಾ ಸಮುದಾಯದ ದೇವಾಲಯಗಳು, ಗ್ರಾಮ ದೇವಾಲಯಗಳು, ಸೀಮೆ ದೇವಾಲಯಗಳು, ಮಾಗಣೆ ದೇವಾಲಯಗಳು ಮತ್ತು ಹೋಬಳಿ ದೇವಾಲಯಗಳೆಂದು ವಿಂಗಡಿಸಬದಾಗಿದೆ. ಈ ರೀತಿಯಲ್ಲಿ ಹೊಸ ಹೊಸ ದೇವಾಲಯಗಳ ನಿರ್ಮಾಣವು ಈ ಪ್ರದೇಶದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ದ್ಯೋತಕವಾಗಿದೆ. ಉಡುಪಿಯಲ್ಲಿ ಹಿಂದೂ ಧರ್ಮದ ವಿವಿಧ ಶಾಖೆಗಳಾದ ಶೈವ, ವೈಷ್ಣವ, ಶಾಕ್ತಾ, ಗಣಾಪತ್ಯ, ವೀರಭದ್ರ, ನಾಗಾರಾಧನೆ, ಭೂತಾರಾಧನೆಗಳಿಗೆ ಸಂಬಂಧಿಸಿದ ಅನೇಕ ದೇವಾಲಯಗಳು ಮಾತ್ರವಲ್ಲದೆ ಬೌದ್ಧ ಹಾಗೂ ಜೈನ ಆರಾಧನಾ ಕೇಂದ್ರಗಳೂ ಇವೆ. ಉಡುಪಿ ಪರಿಸರದ ದೇವಾಲಯಗಳನ್ನು ಅವುಗಳ ಆಕಾರದ ಹಿನ್ನೆಲೆಯಲ್ಲಿ ಅವುಗಳನ್ನು ಮುಖ್ಯವಾಗಿ ಐದು ವಿಭಾಗವಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ– ಗಜಪೃಷ್ಠಾಕಾರದ ದೇವಾಲಯಗಳು, ಚತುರಸ್ರ ದೇವಾಲಯಗಳು, ದೀರ್ಘ ಚತುರಸ್ರ ಅಥವಾ ಆಯತಾಕಾರದ ದೇವಾಲಯಗಳು, ಹಾಗೂ ಮಂಡಲಾಕಾರ ಅಥವಾ ವೃತ್ತಾಕಾರದ ತಳಪಾಯ ಹೊಂದಿರುವ ದೇವಾಲಯಗಳು. ಉಡುಪಿಯಲ್ಲಿ ಮಾತ್ರವಲ್ಲದೆ ಕರ್ನಾಟಕದ ಕರಾವಳಿಯಾದ್ಯಂತ ಕೆರೆಯ ಮಧ್ಯದಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ಉಡುಪಿಯಲ್ಲಿಯೂ ಅಂತಹ ಉದಾಹರಣೆಯನ್ನು

ಕಾಣಬಹುದಾಗಿದೆ. ಶ್ರೀಕೃಷ್ಣ ಮಠದ ಎದುರಿರುವ, ಮಧ್ವ ಸರೋವರದ ಮಧ್ಯಭಾಗದಲ್ಲಿ ಮಧ್ವ ಮಂಟಪವಿದೆ. ಉಡುಪಿ ಜಿಲ್ಲೆಯ ಕುಂಬಾಶಿಯಲ್ಲಿಯೂ ಕೊಳದ ಮಧ್ಯದಲ್ಲಿ ದೇವಾಲಯವನ್ನು ನಿರ್ಮಿಸಿರುವುದನ್ನು ನೋಡಬಹುದಾಗಿದೆ.

ಉಡುಪಿಯ ಸುತ್ತಮುತ್ತ ಹಲವಾರು ಗರಡಿಗಳು, ಬ್ರಹ್ಮಸ್ಥಾನಗಳು, ದೈವಸ್ಥಾನಗಳಿವೆ. ಈ ದೈವಸ್ಥಾನಗಳು ಚೌಕಾಕಾರದ ಒಂದಂಕಣದ ಗುಡಿಗಳಾಗಿವೆ. ಇದರೆದುರುಗಡೆ ಆವರಣವಿಲ್ಲದ ಮುಖಃಮಂಟಪದಂತಿರುವ ಇನ್ನೊಂದು ರಚನೆಯನ್ನು ಕಾಣಬಹುದಾಗಿದೆ. ಆದರೆ ಈ ದೈವಸ್ಥಾನಗಳು ಯಾವ ಕಾಲದಲ್ಲಿ ನಿರ್ಮಿಸಲಾಯಿತು ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟಸಾಧ್ಯವಾಗಿದೆ. ಉಡುಪಿ ರಥಬೀದಿಯಲ್ಲಿರುವ ಶ್ರೀ ಅನಂತೇಶ್ವರ ದೇವಸ್ಥಾನವು ಸುಮಾರು ಕ್ರಿ.ಶ. 7–8ನೆಯ ಶತಮಾನಕ್ಕೆ ಸೇರುವ ಪ್ರಾಚೀನ ದೇವಾಲಯವಾಗಿದೆ. ಶ್ರೀ ಕೃಷ್ಣ ಮಠದ ಶಿಲಾಶಾಸನದಲ್ಲಿ ಈ ದೇವರನ್ನು 'ಉಡುಪಿನ ಶ್ರೀ ಮಹಾದೇವ'ಎಂದು ಕರೆಯಲಾಗಿದೆ. ಅನಂತೇಶ್ವರ ದೇವಾಲಯದ ಇನ್ನೊಂದು ಶಾಸನದಲ್ಲಿಯೂ ಈ ದೇವಾಲಯವನ್ನು ಉಲ್ಲೇಖಿಸಲಾಗಿದೆ. 'ಸುಮಧ್ವವಿಜಯ' ಗ್ರಂಥದಲ್ಲಿ ಈ ದೇವಾಲಯವನ್ನು 'ಮೂಡು ದೇವಾಲಯ' ಎಂದು ಉಲ್ಲೇಖಿಸಲಾಗಿದೆ. ಆದರೆ ಇದು ಯಾವ ಕಾಲದಲ್ಲಿ ನಿರ್ಮಾಣವಾಯಿತೆಂದು ನಿರ್ಧಿಷ್ಟವಾಗಿ ಹೇಳಲು ಯಾವುದೇ ಆಧಾರಗಳಿಲ್ಲ. ಆದರೆ ಈ ದೇವಾಲಯ ಜೀರ್ಣೋದ್ಧಾರಗೊಂಡ ಕುರಿತಂತೆ ಅಲ್ಲಿನ ಶಿಲಾಶಾಸನ ಮಾಹಿತಿ ನೀಡುತ್ತದೆ. ಕ್ರಿ.ಶ. 1399ರ ಉಡುಪಿ ಸಮೀಪದ ಕಲ್ಲಕಂಡಗದ್ದೆ ಶಾಸನದಲ್ಲಿ ಉಡುಪಿಯ ಶೈವದೇವಾಲಯಗಳು ಹಾನಿಗೊಂಡಿರುವ ವಿಷಯ ಪ್ರಸ್ತಾಪಗೊಂಡಿದೆ. ಯಾರು ಯಾವ ಕಾರಣಕ್ಕಾಗಿ ಶೈವಾಲಯಗಳನ್ನು ಹಾನಿಗೊಳಿಸಿದರೆಂದು ತಿಳಿದುಬರುವುದಿಲ್ಲ. ಆ ಶಾಸನದಲ್ಲಿ ಉಲ್ಲೇಖಿಸಿದಂತೆ ವಿಜಯನಗರ ಚಕ್ರವರ್ತಿ ಹರಿಹರನು ಉಡುಪಿಯ 'ಪಡುದೇವ' ಹಾಗೂ 'ಮೂಡುದೇವ' (ಇವು ಈಗಿನ ಅನಂತೇಶ್ವರ ಹಾಗೂ ಚಂದ್ರಮೌಳೇಶ್ವರ ದೇವಾಲಯಗಳಾಗಿವೆ) ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದನೆಂದು ಕಲ್ಲಕಂಡಗದ್ದೆ ಶಾಸನವು ತಿಳಿಸುತ್ತದೆ. ಈ ದೇವಾಲಯದ ಮಹಾದ್ವಾರಕ್ಕೆದುರಾಗಿ ಹೊರ ಭಾಗದಲ್ಲಿ ಬೃಹತ್ ಶಿಲಾಮಯ ಪ್ರಧಾನ ಬಲಿಪೀಠವಿದೆ. ಇದರ ಎತ್ತರ ಸುಮಾರು ಎರಡೂವರೆ ಮೀಟರ್‌ಗಳಾಗಿದೆ. ದೇವಾಲಯದ ಭವ್ಯತೆಗೆ ಮೆರುಗನ್ನು ನೀಡುವಂತಹ ಕಲಾನೈಪುಣ್ಯತೆಯಿಂದ ಕೂಡಿದ ಅತ್ಯಂತ ಸುಂದರವಾದ ರಚನಾಶೈಲಿ ಇದರದ್ದು. ಈ ಶೈಲಿಯು ದೇವಾಲಯದ ಪ್ರಾಚೀನತೆಯನ್ನು ಪ್ರತಿಬಿಂಬಿಸುತ್ತದೆ. ಪ್ರಧಾನ ಬಲಿಪೀಠವು ದೇವಾಲಯದ ಪ್ರಾಚೀನತೆಯನ್ನು ಸೂಚಿಸಬಲ್ಲ ಒಂದೇ ಒಂದು ಆಧಾರವಾಗಿದೆ. ಇದರ ಶೈಲಿ ಸುಮಾರು ಕ್ರಿ.ಶ. 7–8ನೆಯ ಶತಮಾನದ್ದಾಗಿದೆ.

ಪ್ರಧಾನ ಬಲಿಪೀಠದ ಎದುರು ಸುಮಾರು ಹತ್ತು ಮೀಟರು ಎತ್ತರದ ಬೃಹತ್ ಶಿಲಾಸ್ತಂಭವಿದೆ. ಈ ಶಿಲಾಸ್ತಂಭದಲ್ಲಿ ಆದಿತ್ಯ, ನಂದಿಕೇಶ್ವರ ಹಂಸ ಹಾಗೂ ಒಬ್ಬ ಭಕ್ತನ ಕೆತ್ತನೆಗಳಿವೆ. ಬಿ.ಎ.ಸಾಲೆತ್ತೂರ್ ಹಾಗೂ ಎಂ. ಗೋವಿಂದ ಪೈ ಅವರ ಅಭಿಪ್ರಾಯದಂತೆ ಅದು ಜೈನ ಮಾನಸ್ತಂಬವಾಗಿದೆ. ಆದರೆ ಉಡುಪಿ ಸಮೀಪದ ಕಲ್ಲಕಂಡಗದ್ದೆ ಶಾಸನದ ಅಧಾರದಿಂದ ಅನಂತೇಶ್ವರ ದೇವಾಲಯದ ಮುಂಬಾಗದಲ್ಲಿರುವ ಶಿಲಾಸ್ಥಂಭವು ಜೈನರ ಮಾನಸ್ಥಂಭವಾಗಿರದೆ ಅದನ್ನು ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರನು ಸ್ಥಾಪಿಸಿದನೆಂದು ಕೂಡ ಹೇಳಲಾಗಿದೆ. ಇದರ ಪ್ರವೇಶ ದ್ವಾರದಲ್ಲಿ ಬೃಹತ್ತಾದ ಮಂಟಪವಿದೆ. ವಿಶಾಲವಾದ

ಪ್ರಾಂಗಣದೊಳಗೆ ಗಜಪೃಷ್ಠಾಕಾರದಲ್ಲಿ ಈ ಬೃಹತ್ ದೇವಾಲಯವನ್ನು ಕಗ್ಗಲ್ಲಿನಿಂದ ಕಟ್ಟಲಾಗಿದೆ. ಪ್ರಾಕಾರದಲ್ಲಿ ಬಲಿಕಲ್ಲುಗಳೂ ಹಾಗೂ ನವಗ್ರಹ ಕಲ್ಲುಗಳನ್ನೂ ಸ್ಥಾಪಿಸಲಾಗಿದೆ. ಗರ್ಭಗೃಹ ಹಾಗೂ ಪ್ರಾಕಾರಗಳ ನಡುವೆ ವಿಶಾಲವಾದ ಸ್ಥಳವಿದ್ದು ಅದು ಹೊರ ಪ್ರದಕ್ಷಿಣಪಥವಾಗಿದೆ. ಗಜವ್ಯಾಳದ ಮೆಟ್ಟಿಲುಗಳನ್ನೇರಿಕೊಂಡು ಒಳಪ್ರವೇಶಿಸಿದಂತೆ ಕಂಬಗಳಿಂದ ಕೂಡಿದ ನವರಂಗವಿದೆ. ಹಂತಹಂತವಾಗಿ ಮೇಲೇರುವ ಇಲ್ಲಿಯ ನೆಲಮಟ್ಟವು ಗರ್ಭಗೃಹವನ್ನು ಎತ್ತರದ ಸ್ಥಳದಲ್ಲಿರಿಸಿದೆ. ಗರ್ಭಗೃಹದಲ್ಲಿ ಎತ್ತರವಾದ ಮತ್ತು ಸ್ವಯಂಭೂ ಎನ್ನಲಾದ ಶಿವಲಿಂಗವಿದೆ. ಮುಖ ಮಂಟಪದಲ್ಲಿ ಉಪಸ್ಥಾನದೇವತೆಯಾಗಿ ಗಣಪತಿಯಿದೆ. ಗರ್ಭಗೃಹದ ಭಿತ್ತಿಯು ಎತ್ತರವೂ ವಿಶಾಲವೂ ಆಗಿದ್ದು ಹೊರಗಿನ ಭಾಗವು ಆಕರ್ಷಕ ಕೆತ್ತನೆಗಳಿಂದ ಕೂಡಿದೆ. ಈ ಭಾಗವು ಸುಭದ್ರವಾದ ಶಿಲಾಮಯ ರಚನೆ. ಗರ್ಭಗೃಹದ ಸುತ್ತಲಿರುವ ಪ್ರದಕ್ಷಿಣಪಥ ಕತ್ತಲೆಯಲ್ಲಿದೆ. ಇದರ ಹೊರಸುತ್ತಿನಲ್ಲಿರುವ ಮುರಕಲ್ಲಿನ ಸಾಮಾನ್ಯ ಭಿತ್ತಿಯಿಂದಾಗಿ ಇದರ ಸೌಂದರ್ಯ ಮಾತ್ರ ಯಾರಿಗೂ ಗೋಚರಿಸುವುದಿಲ್ಲ. ದೇವಾಲಯದ ಮಾಡು ಎರಡು ನೆಲೆಗಳಲ್ಲಿವೆ. ಕೆಳಗಿನ ಹಂತದ ಮಾಡು ಶಿಲಾಮಯವಾಗಿದ್ದರೆ, ಗರ್ಭಗೃಹದ ಮೇಲಿನ ವಿಮಾನದ ಮಾಡಿಗೆ ತಾಮ್ರದ ಹೊದಿಕೆಯಿದೆ. ಎಲ್ಲಿಯೂ ಮಳೆಯ ನೀರು ಒಳಗೆ ಬಾರದಂತೆ ಎರಡು ಶಿಲಾ ಹೊದಿಕೆಯ ನಡುವೆ ಅಡಿಭಾಗದಲಿ ಇನ್ನೊಂದು ಶಿಲೆಯ ತೊಲೆಯನ್ನು ಇರಿಸಿದ್ದು ಅದರಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಅನುಕೂಲವಾಗುವಂತೆ ಕಾಲುವೆಯನ್ನು ಕೆತ್ತಲಾಗಿದೆ. ಮಾಡಿನ ಎತ್ತರವೂ ದೇವಾಲಯಕ್ಕೆ ಭವ್ಯತೆಯ ಮೆರುಗನ್ನು ತಂದುಕೊಟ್ಟಿದೆ. ದೇವಾಲಯದ ಮಾಡಿನ ಮೇಲೆ ಮೂರು ಕಳಶಗಳನ್ನು ಸ್ಥಾಪಿಸಲಾಗಿದೆ. ಇಲ್ಲಿಯ ಉತ್ಸವ ಮೂರ್ತಿಯು 30 ಸೆ.ಮೀ. ಎತ್ತರದ ಸುಂದರ ಕಂಚಿನ ಪ್ರತಿಮೆಯಾಗಿದೆ.

ಈ ದೇವಾಲಯವು ಉಡುಪಿಯ ಪ್ರಾಚೀನ ವಿದ್ಯಾಕೇಂದ್ರವೂ ಆಗಿತ್ತು. ಈ ಕ್ಷೇತ್ರದಲ್ಲಿ ಆಚಾರ್ಯ ಮಧ್ವರು ಬಾಲ್ಯದಲ್ಲಿ ಅಚ್ಯುತಪ್ರಜ್ಞರಿಂದ ವಿದ್ಯೆ, ಅನಂತರ ಸನ್ಯಾಸ ದೀಕ್ಷೆಯನ್ನು ಪಡೆದರು. ಅನಂತರ ತಮ್ಮ ಶಿಷ್ಯರಿಗೆ ಇಲ್ಲಿ ಪಾಠ ಹೇಳುತ್ತಿದ್ದರೆಂಬ ಐತಿಹ್ಯವಿದೆ. ದೇವಾಲಯದ ನವರಂಗದ ಕಂಬದ ಬಳಿ ಪೀಠವೊಂದಿದ್ದು ಅದನ್ನು ಆಚಾರ್ಯ ಮಧ್ವರು ಕುಳಿತುಕೊಳ್ಳುತ್ತಿದ್ದ ಪೀಠವೆಂದು ನಂಬಲಾಗಿದೆ. ಇದಕ್ಕೆ ನಿತ್ಯ ಪೂಜೆ ನಡೆಯುತ್ತದೆ. ಈ ಸ್ಥಳದಲ್ಲಿ ವಿಗ್ರಹ ಇಲ್ಲದ ಒಂದು ಸುಂದರವಾದ ಗುಡಿ ಇದೆ. ಗುಡಿಯ ಹೊರಗೆ ಬಾಗಿಲ ಮೇಲುಗಡೆ ಶ್ರೀ ಮಧ್ವರ ಸುಂದರ ಶಿಲಾವಿಗ್ರಹವಿದೆ. ಇದನ್ನು ಶ್ರೀ ವಾದಿರಾಜ ತೀರ್ಥರು ಸ್ಥಾಪಿಸಿದ್ದು ಎಂಬ ಪ್ರತೀತಿಯಿದೆ. ದೇವಾಲಯದ ನೈರುತ್ಯ ಭಾಗದಲ್ಲಿ ಶಾಸ್ತಾರನ ಗುಡಿಯಿದೆ. ಪರಿವಾರ ದೈವಗಳ ಸ್ಥಾನದಲ್ಲಿ ಬೊಬ್ಬರ್ಯ, ಕಲ್ಲು ಕುಟ್ಟಿಗ, ಧೂಮಾವತಿ ದೈವಗಳಿದ್ದು, ಇವುಗಳಿಗೆ ವಾರ್ಷಿಕ ಕೋಲ, ನೇಮೋತ್ಸವಗಳನ್ನು ನಡೆಸಲಾಗುತ್ತದೆ.

ಉಡುಪಿಯ ಪರಿಸರದ ದೇವಾಲಯಗಳಲ್ಲಿ ಬಹಳ ಪ್ರಾಚೀನವಾದ ಅಂಬಲಪಾಡಿಯ ಶ್ರೀ ಜನಾರ್ದನ ಮತ್ತು ಶ್ರೀ ಮಹಾಕಾಳಿ ದೇವಾಲಯವು ಮಹತ್ವದ್ದಾಗಿದೆ. ಇಲ್ಲಿ ದೊರೆಯುವ ಶಿಲಾಶಾಸನವೊಂದರ ಪ್ರಕಾರ ಈ ಶಿವಾಲಯ ಕ್ರಿ.ಶ. 1570ರಲ್ಲಿ ಜೀರ್ಣೋದ್ಧಾರಗೊಳಿಸಲಾಯಿತು ಹಾಗೂ ಸಂಪೂರ್ಣವಾಗಿ ಶಿಲಾಮಯಗೊಳಿಸಲಾಯಿತೆಂದು ತಿಳಿದುಬರುತ್ತದೆ. ಬ್ರಹ್ಮಕ್ಷತ್ರಿಯ ವರ್ಗಕ್ಕೆ ಸೇರಿದ ಶಿವನಿಂಡಂಬೂರರ ಮಗ ಶ್ರೀಧರ ನಿಡಂಬೂರರು ರಾಮೇಶ್ವರದ ತೀರ್ಥ ಯಾತ್ರೆಯನ್ನು ಮುಗಿಸಿ ಅಂಬಳಪಾಡಿಗೆ ವಾಪಾಸ್ಸು ಬಂದ ಅನಂತರ ಈ ಕಾರ್ಯ ನೆರವೇರಿಸಿದರು. ಅನಂತರ ದೇವರ ನಿತ್ಯ

ಪೂಜಾ ವಿನಿಯೋಗಕ್ಕಾಗಿ ಭೂದಾನ ಮಾಡಿದರು. ಈ ಶಾಸನ ಆಧಾರದಲ್ಲಿ ನೋಡುವುದಾದರೆ ಇದೊಂದು ಕೆಳದಿ ಅರಸರ ಪ್ರಾರಂಭಿಕ ಕಾಲದ ರಚನೆಯುಳ್ಳ ದೇವಾಲಯವಾಗಿದೆ. ಆದರೆ ಇದೊಂದು ವಾಸ್ತವವಾಗಿ ಬಹಳ ಪ್ರಾಚೀನ ದೇವಾಲಯವಾಗಿದೆ. ಈ ದೇವಾಲಯದ ಪ್ರಾಚೀನತೆಯನ್ನು ಅಲ್ಲಿ ಪೂಜೆಗೊಳ್ಳುತ್ತಿರುವ ಶ್ರೀ ಜನಾರ್ದನನ ವಿಗ್ರಹದ ಅಧಾರದಿಂದ ತಿಳಿಯಬಹುದಾಗಿದೆ. ಶ್ರೀ ಜನಾರ್ದನ ದೇವರ ವಿಗ್ರಹವು ಅತ್ಯಪೂರ್ವವಾದ ಕೆತ್ತನೆಯಿಂದ ಕೂಡಿದ ಕೃಷ್ಣಶಿಲಾ ವಿಗ್ರಹವಾಗಿದೆ. ಸುಮಾರು 90 ಸೆಂ.ಮೀ. ಎತ್ತರವಿರುವ ಈ ವಿಗ್ರಹ ಸೌಂದರ್ಯ ಮತ್ತು ಗಾಂಭೀರ್ಯತೆಯಿಂದ ಕೂಡಿದ್ದು ಅತ್ಯಂತ ಆಕರ್ಷಣೀಯವಾಗಿದೆ. ಇದು ಪ್ರಾಯಶಃ ಕ್ರಿ.ಶ. 10–11ನೆಯ ಶತಮಾನಕ್ಕೆ ಸೇರುವ ವಿಗ್ರಹವಾಗಿದೆ. ರಾಷ್ಟ್ರಕೂಟ ಚಾಲುಕ್ಯ ಶೈಲಿಗಳ ಸುಂದರ ಮಿಶ್ರಣ ಈ ಮೂರ್ತಿಯಲ್ಲಿ ಕಾಣಬಹುದಾಗಿದೆ. ಶ್ರೀ ಜನಾರ್ದನನ ಗುಡಿಯ ಉತ್ತರದಿಕ್ಕಿನಲ್ಲಿರುವ ಶ್ರೀದೇವಿಯ ಮೂಲ ಗುಡಿಯು ಅತ್ಯಂತ ಪ್ರಾಚೀನವಾದುದು. ಅದು ಮೂಲ ಜನಾರ್ದನ ವಿಗ್ರಹಕ್ಕಿಂತಲೂ ಹೆಚ್ಚು ಪ್ರಾಚೀನವಾದುದಾಗಿ ಕಂಡುಬರುತ್ತದೆ. ಈ ಮಹಾಕಾಳಿಯು ನಿಂಡಂಬೂರು ಮಾಗಣೆಯ ಎಂಟು ಗ್ರಾಮಗಳ ಜನರ ಆರಾಧ್ಯದೇವತೆಯಾಗಿದೆ. ಈ ಸ್ಥಳ ಹಿಂದೆ ಕಾಡಿನಿಂದ ಆವರಿಸಿತ್ತೆಂದು, ಈ ಸ್ಥಳದಲ್ಲಿ ಆ ಪ್ರದೇಶದ ಜನರ ವಿವಾದಗಳನ್ನು ಚರ್ಚಿಸಿ ನ್ಯಾಯತೀರ್ಮಾನ ನೀಡಲಾಗುತಿತ್ತು. ಹಾಗಾಗಿ ಈ ಪ್ರದೇಶಕ್ಕೆ ಅಂಬಲಪಾಡಿಯಂದು ಹೆಸರುಬಂತೆಂದು ಅಭಿಪ್ರಾಯಪಡಲಾಗಿದೆ. ಈ ಹೆಸರು ಮುಂದೆ ಗ್ರಾಮದ ಹೆಸರಾಗಿ ಪರಿವರ್ತಿತಗೊಂಡಿತು. ಜನಸಾಮಾನ್ಯರಿಗೊಲಿದಿರುವ ಈ ದೇವಿ ಅತ್ಯಂತ ಪ್ರಾಚೀನ ಕಾಲದಲ್ಲಿ ಅಲ್ಲಿನ ಜನಸಮಾನ್ಯರಿಂದಲೇ ಪೂಜೆ ಗೊಂಡಿರಬೇಕು. ಕಾಲ ಕ್ರಮೇಣ ವೈದಿಕ ವಿಧಿವಿಧಾನಗಳ ಚೌಕಟ್ಟಿಗೆ ಸೇರಿ ಬ್ರಾಹ್ಮಣ ಅರ್ಚಕರ ವಶವಾಗಿರಬೇಕು ಎಂಬುವುದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಅಂಬಲಪಾಡಿಯ ಶ್ರೀದೇವಿಯ ಕೈಂಕರ್ಯದಲ್ಲಾದ ಮಾರ್ಪಾಡು ಕ್ರಿ.ಶ. 8–9 ಶತಮಾನದಷ್ಟು ಹಿಂದೇಯೇ ಆಗಿರಬೇಕೆಂದು ಅಭಿಪ್ರಾಯಪಡಲಾಗಿದೆ.

ಶ್ರೀಕೃಷ್ಣ ಮಠವು ಉಡುಪಿಯ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣನ ಮೂರ್ತಿಯನ್ನು ಅನಂತ ಮಠದ ಪರಿಸರದಲ್ಲಿ ಆಗಮ ಸಿದ್ಧಾಂತದ ಆಧಾರದಲ್ಲಿ ಈಶ್ವರ ಸಂವತ್ಸರದ ಮಾಘ ಶುದ್ಧ ತೃತೀಯದಂದು (ಕ್ರಿ. ಶ. 1278) ಪ್ರತಿಷ್ಠಾಪಿಸಿದ ತರುವಾಯ ನಾಲ್ಕು ಬಾರಿ ಶ್ರೀಕೃಷ್ಣ ಮಠವನ್ನು ಜೀರ್ಣೋದ್ಧಾರ ಮಾಡಿದ ಉಲ್ಲೇಖಗಳಿವೆ.

ಶ್ರೀಕೃಷ್ಣ ಮಠದ ಜೀರ್ಣೋದ್ಧಾರದ ಮೊದಲ ಉಲ್ಲೇಖ ಕ್ರಿ. ಶ. 1394ರ ಶಾಸನದಲ್ಲಿ ಕಂಡುಬರುತ್ತದೆ. ಈ ಶಾಸನದಲ್ಲಿ ಬಾರಕೂರಿನ ರಾಜ್ಯಪಾಲರಾದ ಮಲ್ಲಪ್ಪ ಒಡೆಯರು ಪುತ್ತಿಗೆ ಮಠದ ಪರಂಪರೆಯ ನಾಲ್ಕನೆಯ ಯತಿಗಳಾದ ಶ್ರೀ ಯಾದವೇಂದ್ರತೀರ್ಥರ ಪರ್ಯಾಯ ಕಾಲದಲ್ಲಿ ಶ್ರೀಕೃಷ್ಣ ದೇವರ ದರುಶನಕ್ಕೆ ಬಂದ ಸಂದರ್ಭದಲ್ಲಿ ದೇವರ ಪೂಜೆಗೆ ಭೂದಾನ ನೀಡಿದುದಲ್ಲದೆ ದೇವರ ಮುಂಭಾಗದಲ್ಲಿ ತಾಮ್ರದ ಹೊದಿಕೆಯ ಮಂಟಪವನ್ನು ಕಟ್ಟಿಸಿ ಕಂಚಿನ ವೃಂದಾವನ ಹಾಕಿಸಿದ ಉಲ್ಲೇಖ ಮೇಲೆ ಉಲ್ಲೇಖಿಸಿದ ಶಾಸನದಲ್ಲಿದೆ. ಇದು ಉಡುಪಿ ಶ್ರೀಕೃಷ್ಣನ ಶಾಸನೋಕ್ತ ಪ್ರಥಮ ಉಲ್ಲೇಖವಾಗಿದೆ. ಅಲ್ಲದೆ ಆ ಸಂದರ್ಭದಲ್ಲಿ ಕೃಷ್ಣದೇವರ ಬಡಗು(ಉತ್ತರ) ದಿಕ್ಕಿನಲ್ಲಿಯ ಸ್ಥಳವನ್ನು ದಾನ ನೀಡಿದ ವಿವರವಿದೆ. ಅದೇ ಶಾಸನದಲ್ಲಿ ಬೋಜನ ಶಾಲೆಯ ಉಲ್ಲೇಖವಿದ್ದು ಆಕಾಲದಲ್ಲೇ ಅಲ್ಲಿ ಅನ್ನದಾನ

ನಡೆಯುತ್ತಿತ್ತೆನ್ನುವುದು ತಿಳಿದುಬರುತ್ತದೆ. ಕ್ರಿ. ಶ 1395ರ 1ನೇ ಹರಿಹರನ ಶಾಸನದಲ್ಲಿ. ಉಡುಪಿಯ 'ಶ್ರೀಕೃಷ್ಣ ದೇವರ' ಉಲ್ಲೇಖ ಕಂಡುಬರುತ್ತದೆ. ಶಾಸನದಲ್ಲಿ ಉಲ್ಲೇಖಿಸಿದಂತೆ 1ನೇ ಹರಿಹರನ ಆಜ್ಞೆಯಂತೆ ಹೆಗ್ಗಡೆ 'ಶಂಕರಸರು ಬಾರಕೂರು ರಾಜ್ಯವನ್ನಾಳುವ ಕಾಲದಲ್ಲಿ ಶಿವಳ್ಳಿಯ ಮೂಡಲ ನಿಡುಂಬುರ ಗ್ರಾಮದ ಮಧ್ಯದ ಉಡುಪಿನ ಸ್ಥಾನದ ಶ್ರೀ ಕೃಷ್ಣ ದೇವರಿಗೆ ನಡೆವ ಅಮೃತಪಡಿ ನಂದಾ ದೀಪ್ತಿಗೆ ಮೂಲವಾಗಿ ಕೊಂಡ ಗದ್ದೆಗಳ ವಿವರವಿದೆ.

ಕ್ರಿ.ಶ. 1435ರಲ್ಲಿ ವಿಜಯನಗರದ ಅರಸು 1ನೆಯ ದೇವರಾಯನ ಆಳ್ವಿಕಯ ಕಾಲದಲ್ಲಿ ಬಾರಕೂರು ರಾಜ್ಯದ ರಾಜ್ಯಪಾಲನಾಗಿದ್ದ ಅಣ್ಣಪ್ಪ ಒಡೆಯನು ಯಾವುದೋ ಕಾರಣದಿಂದ ಶಿವಳ್ಳಿ ಗ್ರಾಮದ ವೇಲೆ ದಾಳಿ ಮಾಡಿದನೆಂದು ಅದರ ಪರಿಣಾಮವಾಗಿ ಅಲ್ಲಿಯ 'ದೇವಸ್ತನದ ಅನ್ಯಮಾನ್ಯಂಗಳು ತಪಿದಲ್ಲಿ, ಉಡುಪಿನ ಶ್ರೀಕೃಷ್ಣ ದೇವರ ಪ್ರತಿಮಾಭಲನವಾದ್ದಲ್ಲಿ' ಪೂಜೆ ಪುನಸ್ಕಾರಗಳೂ ನಿಂತುಹೋಗಿದ್ದವು. ಇದರಿಂದ ಮನನೊಂದ ಶಿವಳ್ಳಿ ಗ್ರಾಮದವರನ್ನು ಸಂತೈಸಿದ ಬಾರಕೂರು ನಗರದ ಕಟ್ಟಳೆಯವರು ಶ್ರೀಕೃಷ್ಣ ಮಠವು ಯಥಾಸ್ಥಿತಿಗೆ ಹಿಂದಿರುಗುವಂತೆ ಮಾಡಬೇಕೆಂದು 1ನೆಯ ದೇವರಾಯನಲ್ಲಿ ಕೇಳಿಕೊಂಡರು. ಅವರ ಬೇಡಿಕೆಯಂತೆ ಅರಸನು ಅಣ್ಣಪ್ಪ ಒಡೆಯನಿಗೆ ಆಜ್ಞೆ ಮಾಡಲು, ಅವನ ನಿರೂಪದಿಂದ ಸಿಂಗರಸ ಒಡೆಯನು ಶ್ರೀಕೃಷ್ಣ ಮಠಕ್ಕೆ ಹಲವು ದಾನಗಳನ್ನು ನೀಡಿದನು. ಇದರ ಪರಿಣಾಮವಾಗಿ ಶಿವಳ್ಳಿಯ ಮತ್ತು ಶ್ರೀಕೃಷ್ಣ ಮಠದ ಪರಿಸ್ಥಿತಿಯು ಎಂದಿನಂತೆಯೇ ಸುಧಾರಿತಗೊಂಡಿತು ಎನ್ನುವ ವಿಚಾರ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಆದರೆ ಯಾವ ಕಾರಣಕ್ಕಾಗಿ ಕೃಷ್ಣ ಮಠದ ಮೇಲೆ ದಾಳಿಮಾಡಲಾಯಿತೆಂದು ತಿಳಿದುಬರುವುದಿಲ್ಲ. ಎರಡನೆಯದಾಗಿ ದಿನಾಂಕ 13–4–1613ರಲ್ಲಿ ವಿಜಯನಗರ ರಾಜ ವೆಂಕಟಪತಿರಾಯನು ಪೆನುಗುಂಡೆಯ ಸಿಂಹಾಸನದಲ್ಲಿರಲು, ಅವರ ಆಜ್ಞಾಧಾರಕನಾದ ಕೆಳದಿ ವೆಂಕಟಪ್ಪನಾಯಕರು ತುಳುರಾಜ್ಯವನ್ನಾಳುವ ಕಾಲದಲ್ಲಿ ರಾಮಕೃಷ್ಣ ಒಡೆಯರು ಬಾರಕೂರ ಸಿಂಹಾಸನವನ್ನಾಳುತ್ತಿದ್ದ ಸಮಯದಲ್ಲಿ, ಶೀರೂರು ಮಠದ ಶ್ರೀಮದ್ವೇದವೇದ್ಯ ಶ್ರೀಪಾದಂಗಳವರ ಪರ್ಯಾಯ ಕಾಲದಲ್ಲಿ ಶ್ರೀ ಕೃಷ್ಣದೇವರ ಮಠವನ್ನು ಜೀರ್ಣೋದ್ಧಾರ ಮಾಡಿದ ಉಲ್ಲೇಖ ಅಲ್ಲಿನ ಶಾಸನದಲ್ಲಿದೆ. ಆ ಶಾಸನವು 'ಉಡುಪಿನ ಶ್ರೀ ಕೃಷ್ಣದೇವರ ಮಠವು ಮೊದಲೇ ಮರಗೆಲಸವಾಗಿರಲಾಗಿ ಶ್ರೀಕೃಷ್ಣದೇವರನೂ ಹೊರಮಂಟಪಕೆ ಬಿಜೆಮಾಡಿಸಿ ಅಲ್ಲಿಯೂ ದೇವರಪೂಜೆಯನ್ನು ಸಾಂಗವಾಗಿ ನಡೆಸುತಲೆ ದೇವರ ಗರ್ಭಾಗಾರಮುಂದಣ ಮಠವನೂ ಶಿಲಾಮಯವ ಮಾಡಿಸಿ ಆಮೇಲೆ ಎರಡುನೆಲೆಯಾಗಿ ತಾಂಬ್ರದ ಹೊದಿಕೆಯನೂ ಮಾಡಿಸಿ ಆಮೇಲೆ ಕಲಶಸ್ಥಾಪನೆಯನೂ ಮಾಡಿಸಿ' ವಿದ್ಯುಕ್ತವಾಗಿ ಶ್ರೀಕೃಷ್ಣ ದೇವರನ್ನು ಪುನಃ ಪ್ರತಿಷ್ಠೆಯನ್ನು ಮಾಡಿರುವುದು ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಹಾಗಾಗಿ ಕ್ರಿ. ಶ. 1613ರ ಮೊದಲು ಶ್ರೀಕೃಷ್ಣ ಮಠವು ಮರದ ಮಾಡನ್ನು ಹೊಂದಿತ್ತೆಂದು ತಿಳಿದುಬರುತ್ತದೆ. ಕ್ರಿ. ಶ. 1613ರಲ್ಲಿ ಮಠವನ್ನು ಶಿಲಾಮಯ ಗೊಳಿಸಿದ್ದುದು ಕಂಡುಬರುತ್ತದೆ. ಅಲ್ಲದೆ ತಾಮ್ರದ ಹೊದಿಕೆಯೊಂದಿಗೆ ಕಳಶ ಸ್ಥಾಪಿಸಿದ್ದುದ್ದುಕೂಡ ತಿಳಿದುಬರುತ್ತದೆ. 'ಶ್ರೀ ಕೃಷ್ಣ ದೇವರ ಮಠವ ಶಿಲಾಮಯ ಮಾಡುವುದಕ್ಕೆ ಹೊರಗೆ ಬಂದ ದ್ರವ್ಯ ಹೊರತಾಗಿ ನಂಮಕಯ್ಯ ಮುಟ್ಟಿಸಿದ ದ್ರವ್ಯ' ಎಂದು ಅದೇ ಶಾಸನದಲ್ಲಿ ಉಲ್ಲೇಖವಿದೆ. ಹಾಗಾಗಿ ಶ್ರೀಕೃಷ್ಣ ಮಠದ ಜೀರ್ಣೋದ್ಧಾರಕ್ಕೆ ರಾಜನಿಂದ ಮಾತ್ರವಲ್ಲದೆ ಖಾಸಗಿ ವ್ಯಕ್ತಿಗಳಿಂದಲೂ ದಾನರೂಪದ ಸಹಾಯ ಬಂದಿರುತ್ತದೆಂದು ತಿಳಿದುಬರುತ್ತದೆ. ಅದೇ

ಸಂದರ್ಭದಲ್ಲಿ ಶ್ರೀ ಕೃಷ್ಣ ದೇವರ ಅಮೃತಪಡಿ ನಂದಾದೀಪಕ್ಕೆ ಬಾರಕೂರು ರಾಜ್ಯದ ನಲವತ್ತು ನಾಡೊಳಗಣ ಹೂವಿನಕೆರೆ ಗ್ರಾಮದಲ್ಲಿನ ಭೂಮಿಯನ್ನು ದಾನನೀಡಿದ ಉಲ್ಲೇಖವಿದೆ. ಹರಿವಾಣ ನೈವೇದ್ಯ, ನಂದಾದೀಪ, ಅಮೃತ ಪಡಿಯಂತಹ ಸೇವೆಗಳ ಉಲ್ಲೇಖವು ಈ ಶಾಸನದಲ್ಲಿ ಕಂಡುಬರುತ್ತದೆ. ಶ್ರೀಕೃಷ್ಣ ಮಠದಲ್ಲಿ ದೊರೆತ ಅದೇ ದಿನಾಂಕದ ಅಂದರೆ 13–4–1613ರ ಅಲ್ಲಿನ ಇನ್ನೊಂದು ಶಾಸನದಿಂದ ಜೀರ್ಣೋದ್ಧಾರಕ್ಕೆ ಸಂಬಂದಿಸಿದ ಇನ್ನಷ್ಟು ಮಾಹಿತಿ ಲಭ್ಯವಿದೆ. ಆ ಶಾಸನದಲ್ಲಿ ಕೌಶಿಕ ಗೋತ್ರದ ರುಕ್ಯಾಖೆಯ ದಾಂಪ್ರಭುಗಳ ಮಗ ದಾಮರ್ಸಪ್ರಭು ಮಾಡಿದ ಧರ್ಮದ ವಿವರವಿದೆ. ತನ್ನ ಹಿರಿತಂದೆ ರಂಗ ಪ್ರಭುಗಳಿಗೆ ಅಕ್ಷಯಪುಣ್ಯ ಪ್ರಾಪ್ತಿಯಾಗಲೆಂದು ನಿತ್ಯ ಹರಿವಾಣ ನೈವೇದ್ಯಕ್ಕೆ ಹಾಗೂ ಯತಿ ಬಿಕ್ಷೆಗೆಗಾಗಿ ನೀಡಿದ ದಾನದ ವಿವರಗಳಿವೆ. ಅಲ್ಲದೆ ಗೋವಿಂದ ಪ್ರಭು ತನ್ನ ಮಾತಾಪಿತ್ರರಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದು ಹಾಗೂ ತನ್ನ ಮಕ್ಕಳಿಗೆ ಪುತ್ರ ಪೌತ್ರಾಭಿವೃದ್ಧಿಯಾಗಬೇಕೆಂದು ಕೃಷ್ಣಮಠದ ಜೀರ್ಣೋದ್ಧಾರ ಕಾಲದಲ್ಲಿ ಗುಂಡೋತ್ತರ ತಳಗಲ್ಲು, ಪಾಣೀಪೀಠ, ಚೌಕದ ಬಿತ್ತಿ, ದ್ವಾರಬಂಧ, ತೊಲೆ, ಮುಚಳ ಕಲ್ಲು ಮಾಡಿಸುವ ಕೆಲಸಕ್ಕೆ ತಗಲುವ ವೆಚ್ಚವನ್ನು ನೀಡಿದ ಉಲ್ಲೇಖವಿದೆ. ಮೂರನೆಯದಾಗಿ ಸೋದೆ ಮಠದ ಕೈಪಿಯತ್‌ನಲ್ಲಿ ವಾದಿರಾಜತೀರ್ಥರು ಶ್ರೀಕೃಷ್ಣಮಠದಲ್ಲಿ ಜಾರಿಗೊಳಿಸಿದ ಬದಲಾವಣೆಗಳು ಮತ್ತು ಹೊಸತನಗಳ ಬಗ್ಗೆ ಮಾಹಿತಿ ನೀಡುತ್ತದೆ. ಗರ್ಭಗ್ರಹದ ನವೀಕರಣ, ಮಠದೊಳಗೆ ಹೊಸ ವಿಗ್ರಹಗಳ ಸ್ಥಾಪನೆ ಕುರಿತಂತೆ ಮಾಹಿತಿ ಇದೆ.

ಶ್ರೀ ಕೃಷ್ಣ ಮಠ ಮತ್ತು ಅಷ್ಟಮಠಗಳಿಗೆ ಈಗಿನ ರೂಪವನ್ನು ನೀಡಿದವರು ಶ್ರೀ ವಾದಿರಾಜ ತೀರ್ಥರು. ಕ್ರಿ.ಶ. 1530ರಲ್ಲಿ ಶ್ರೀ ವಾದಿರಾಜ ತೀರ್ಥರು ಶ್ರೀ ಕೃಷ್ಣಮಠವನ್ನು ಜೀರ್ಣೋದ್ಧಾರ ಮಾಡಿದರೆಂದು 'ವಾದಿರಾಜಗುರುವರ ಚರಿತಾಂಮ್ರುತ'ದಲ್ಲಿಯೂ ಉಲ್ಲೇಖಿಸಲಾಗಿದೆ. ಉಡುಪಿಯ ಯತಿಪರಂಪರೆಯಲ್ಲಿ ಬಹಳ ಪ್ರಮುಖರಾದವರು ವಾದಿರಾಜ ಸ್ವಾಮಿಗಳು. ಉಡುಪಿಯ ವೈದಿಕ ಪರಂಪರೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳನ್ನು ನೀಡಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಉಡುಪಿಗೆ ಶಾಶ್ವತ ಸ್ಥಾನ ಕಲ್ಪಿಸಿಕೊಟ್ಟರು. ವಾದಿರಾಜತೀರ್ಥರು ಇವರು 120 ವರ್ಷಗಳಕಾಲ ಬದುಕಿ ಕ್ರಿ. ಶ. 1600ರಲ್ಲಿ ಸೋದೆಯಲ್ಲಿ ವೃಂದಾವನ ಪ್ರವೇಶ ಮಾಡಿದರು. ವಾದಿರಾಜರಷ್ಟು ದೀರ್ಘಕಾಲ ಧಾರ್ಮಿಕಪೀಠಾಧಿಪತ್ಯ ಮಾಡಿದವರು ಭರತಖಂಡದಲ್ಲೇ ಇನ್ನೊಬ್ಬರಿಲ್ಲವೆಂದು ಹೇಳಲಾಗಿದೆ. ಸೋದೆ ಮಠದ 20ನೇ ಮಠಾದೀಶರಾದ ವಾದಿರಾಜರ ಕುರಿತಂತೆ ಎರಡು ಜೀವನಚರಿತ್ರೆಗಳು ಲಭ್ಯವಿದೆ. ರಾಮಚಂದ್ರಾಚಾರ್ಯರ 'ವಾದಿರಾಜ ಗುರುವರ ಚರಿತಾಮ್ರುತ' ಮತ್ತು ರಘುನಾಥಾಚಾರ್ಯರ 'ವ್ರತ್ತರತ್ನಸಂಗ್ರಹ' (ವಾದಿರಾಜ ವಿಜಯ). ಅಷ್ಟಮಠಗಳಲ್ಲೊಂದಾದ ಕುಂಬಾಶಿಮಠದ ಮಠಾದೀಶರು ಸ್ವರ್ಗಸ್ತರಾದ ಮೇಲೆ ವಾದಿರಾಜರು ಅದರ ಮಠಾದೀಶರಾದರು. ತನ್ನ 120 ವರ್ಷ ಬದುಕಿನಲ್ಲಿ ಶ್ರೇಷ್ಠ ಬರಹಗಾರರಾಗಿ, ಸಮಾಜ ಸುಧಾರಕರಾಗಿ, ಶ್ರೀಕೃಷ್ಣ ಮಠದಲ್ಲಿ ಅನೇಕ ಬದಲಾವಣೆಗಳನ್ನು ಜಾರಿಗೆ ತಂದರು. ಅಂದು ವಾದಿರಾಜರು ಮಾಡಿದ ಸುಧಾರಣೆಗಳು ಇಂದಿಗೂ ಆಚರಣೆಯಲ್ಲಿವೆ. ಎರಡು ವರುಷಕ್ಕೊಮ್ಮೆ ನಡೆಯುವ ಪರ್ಯಾಯ ಮಹೋತ್ಸವ, ಶ್ರೀಕೃಷ್ಣನಿಗೆ ಬೆಳಗ್ಗಿನಿಂದ ರಾತ್ರಿವರೆಗೆ ಪ್ರತಿದಿನವೂ ಮುಂಜಾನೆಯಿಂದ ರಾತ್ರಿಯವರೆಗೆ ನಿರ್ಮಾಲ್ಯ ವಿಸರ್ಜನೆ, ಉಷಃಕಾಲ ಪೂಜೆ, ಪಂಚಾಮೃತ ಅಭಿಷೇಕಗಳಿಂದ ಶುರುವಾಗಿ, ಚಾಮರ ಸೇವೆ, ರಾತ್ರಿ ಪೂಜೆ, ತೊಟ್ಟಿಲಲ್ಲಿಟ್ಟು ಜೋಗುಳ ಹಾಡು ಹಾಡಿ,

ಕೊಳಲು ವಾದನದ ಜತೆ ಕೃಷ್ಣನನ್ನು ಮಲಗಿಸುವ ಶಯನೋತ್ಸವಗಳವರೆಗೆನ 14 ರೀತಿಯ ವಿಶಿಷ್ಟ ಪೂಜೆಗಳು ಮತ್ತು ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಅಯನೋತ್ಸವ, ಸಂವತ್ಸರೋತ್ಸವಗಳೇ ಮೊದಲಾದ ಉತ್ಸವ ಕ್ರಮಗಳನ್ನು ಪ್ರಾರಂಭಿಸಿದವರೂ ವಾದಿರಾಜರೇ. ಸೌಂದರ್ಯ ಪ್ರಜ್ಞೆಯುಳ್ಳ ಈ ಅಪರೂಪದ ಯತಿವರೇಣ್ಯರು ಅನೇಕ ಬಗೆಯ ವಾದ್ಯವಾದನಗಳಿಂದ ಶ್ರೀಕೃಷ್ಣನನ್ನು ಅನುದಿನವೂ ಪೂಜಿಸಲ್ಪಡುವಂತೆ ಎಲ್ಲಾ ಕಟ್ಟುಕಟ್ಟಳೆಗಳಿಗೂ ಕಲಾತ್ಮಕವಾದ ಬುನಾದಿ ಹಾಕಿದರು. ದ್ವೈತ ಸಿದ್ಧಾಂತ ಹಾಗೂ ಶ್ರೀಕೃಷ್ಣ ಮಠ ಮತ್ತು ಅಷ್ಟ ಮಠಗಳ ಸ್ಥಾಪಕರಾಗಿ ಮಧ್ವಾಚಾರ್ಯರು ವಿಶ್ವವಿಖ್ಯಾತರಾದರು. ಆದರೆ ಉಡುಪಿ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಹೊಸ ವೈಭವ ಮತ್ತು ಮೆರುಗನ್ನು ನೀಡಿದ ಕೀರ್ತಿ ಮಧ್ವರಿಗಿಂತ ಹೆಚ್ಚಾಗಿ ವಾದಿರಾಜ ತೀರ್ಥರಿಗೆ ಸಲ್ಲುತ್ತದೆ. ಶಾಸನದಲ್ಲಿ ವಾದಿರಾಜರನ್ನು ವೈಷ್ಣವ ಸಿದ್ಧಾಂತದ ಪ್ರತಿಷ್ಠಾಪನಾಚಾರ್ಯ ಎಂದು ಕರೆಯಲಾಗಿದೆ. ಆರ್ಥಿಕವಾಗಿ ಹೇರಳವಾಗಿ ದೇಣಿಗೆಯನ್ನು ಸ್ವೀಕರಿಸುವ ಮೂಲಕ ಶ್ರೀಕೃಷ್ಣ ಮಠವನ್ನು ಶ್ರೀಮಂತ ಗೊಳಿಸಿದರು. ಅಲ್ಲದೆ ಕೋಟೇಶ್ವರ ಬ್ರಾಹ್ಮಣರು ಮತ್ತು ಸ್ವರ್ಣಕಾರರನ್ನು ಮಾದ್ವ ಸಾಂಪ್ರದಾಯಕ್ಕೆ ಸೇರಿಸಿಕೊಂಡರು. ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯನ ಆಸ್ಥಾನಕ್ಕೆ ವಾದಿರಾಜರು ಬೇಟಿ ನೀಡಿದರು. ಅಲ್ಲಿನ ಪಂಡಿತರೊಂದಿಗೆ ಚರ್ಚಾಗೋಷ್ಠಿ ನಡೆಸಿದ ವಾದಿರಾಜರು ಅವರನೆಲ್ಲಾ ಚರ್ಚೆಯಲ್ಲಿ ಸೋಲಿಸಿದರು. ವಾದಿರಾಜರ ಪಾಂಡಿತ್ಯಕ್ಕೆ ಬೆರಗಾದ ಕೃಷ್ಣದೇವರಾಯನು 'ಪ್ರಸಂಗಾಭರಣ ತೀರ್ಥ' ಎನ್ನುವ ಬಿರುದನ್ನು ವಾದಿರಾಜರಿಗೆ ನೀಡಿಗೌರವಿಸಿದರು. ಎರಡನೇ ಬಾರೀ ಹಂಪಿಗೆ ಬೇಟಿನೀಡಿದ ವಾದಿರಾಜರು ಚಕ್ರವರ್ತಿ ಅಚ್ಯುತರಾಯನನ್ನು ಬೇಟಿಯಾದರು. ಸ್ಮಾರ್ಥ ಬ್ರಾಹ್ಮಣರ ವಷದಲ್ಲಿದ್ದ ಉಡುಪಿಯ ಅತೀ ಪ್ರಾಚೀನ ದೇವಾಲಯಗಳಾದ ಚಂದ್ರಮೌಳೇಶ್ವರ ಹಾಗೂ ಅನಂತೇಶ್ವರ ದೇವಾಲಯಗಳನ್ನು ಮಾಧ್ವರವಶಕ್ಕೆ ತೆಗೆದುಕೊಂಡರು ಮಾತ್ರವಲ್ಲದೆ ಆ ದೇವಾಲಯಗಳನ್ನು ಸಂಪೂರ್ಣ ಜೀರ್ಣೋದ್ಧಾರ ನಕಾಶೆಯನ್ನು ಚಕ್ರವರ್ತಿಗೆ ನೀಡಿ ಚಕ್ರವರ್ತಿಯಿಂದ ಆರ್ಥಿಕ ಸಹಾಯವನ್ನು ಪಡೆದರು. ಉಡುಪಿಯು ಒಂದು ಸಾಂಸ್ಕ್ರತಿಕ ಕೇಂದ್ರವಾಗಿ ಬೆಳೆಯಲು ವಾದಿರಾಜರ ಕೊಡುಗೆ ಅಪಾರವಾದುದು. ಸೋದೆ ಮಠದ ಕೈಪಿಯತ್ ವಾದಿರಾಜತೀರ್ಥರು ಶ್ರೀಕೃಷ್ಣಮಠದಲ್ಲಿ ಜಾರಿಗೊಳಿಸಿದ ಬದಲಾವಣೆಗಳು ಮತ್ತು ಹೊಸತನಗಳ ಬಗ್ಗೆ ಮಾಹಿತಿ ನೀಡುತ್ತದೆ. ಗರ್ಭಗ್ರಹದ ನವೀಕರಣ, ಮಠದೊಳಗೆ ಹೊಸ ವಿಗ್ರಹಗಳ ಸ್ಥಾಪನೆ ಕುರಿತಂತೆ ಮಾಹಿತಿ ಇದೆ. ಶ್ರೀ ಕೃಷ್ಣ ಮಠ ಮತ್ತು ಅಷ್ಟಮಠಗಳಿಗೆ ಈಗಿನ ರೂಪವನ್ನು ನೀಡಿದವರು ಶ್ರೀ ವಾದಿರಾಜ ತೀರ್ಥರು. ವಾದಿರಾಜರ ತೀಥರು ಕ್ರಿ. ಶ 1532, 1548, 1564, ಹಾಗೂ 1580ರಲ್ಲಿ ನಾಲ್ಕು ಬಾರಿ ಪರ್ಯಾಯ ಪೀಠವನ್ನೇರಿದ್ದರು. ಪರ್ಯಾಯ ಶ್ರೀಕೃಷ್ಣಮಠವನ್ನು ಜೀರ್ಣೋದ್ಧಾರಗೊಳಿಸಿದ ನಂತರ ವಾದಿರಾಜರು, ಶ್ರೀಕೃಷ್ಣನ ಪೂಜೆಯ ಕುರಿತಂತೆ ಮುಖ್ಯವಾದ ಬದಲಾವಣೆಯನ್ನು ಜಾರಿಗೆ ತಂದರು. ಈ ಮೊದಲು ಅಷ್ಟಮಠಾದೀಶರು ತಲಾ ಎರಡು ತಿಂಗಳಂತೆ ಸರದಿಯಲ್ಲಿ ಶ್ರೀಕೃಷ್ಣನ ಪೂಜೆ ಮಾಡುತ್ತಿದ್ದರು. ಒಬ್ಬ ಮಠಾಧೀಶರಿಗೆ ಒಂದು ಸರದಿಯ ಪೂಜೆಯ ನಂತರ 16 ತಿಂಗಳ ಕಾಲಾವಾಕಾಶದ ಬಳಿಕ ಇನ್ನೊಂದು ಅವದಿಗೆ ಪೂಜೆಮಾಡುವ ಅವಕಾಶ ದೊರೆಯುತ್ತಿತ್ತು. ಈ ಒಂದು ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದ ವಾದಿರಾಜರು ಎರಡು ತಿಂಗಳ ಪೂಜಾವಿಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಿದರು. ಹೀಗೆ ಪ್ರತೀ ಮಠಾಧೀಶರಿಗೂ ನಿರಂತರವಾಗಿ ಎರಡು ವರ್ಷಗಳ ಕಾಲ ಶ್ರೀಕೃಷ್ಣನ ಪೂಜೆ ನಡೆಸಿ, ನಂತರ 16ವರ್ಷಗಳ

ಬಳಿಕ ಮತ್ತೆ ಪೂಜೆ ಮಾಡುವ ಅವಕಾಶ ದೊರೆಯುವಂತೆ ಮಾಡಿದರು. ಈ 16ವರ್ಷಗಳ ಬಿಡುವಿನಲ್ಲಿ ಮಠಾಧೀಶರು ಅಧ್ಯಯನ, ಮತಪ್ರಚಾರ ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಹೆಚ್ಚಿನ ಅವಕಾಶ ಕಲ್ಪಿಸಿದರು. ಪ್ರತೀ ಎರಡು ವರ್ಷಗಳಿಗೊಮ್ಮೆ ಶ್ರೀಕೃಷ್ಣನನ್ನು ಪೂಜಿಸುವ ಅಧಿಕಾರ ಹಸ್ತಾಂತರವನ್ನು ಬಹಳ ವಿಜೃಂಭಣೆಯಿಂದ ಸಾಂಪ್ರಾದಾಯಿಕವಾಗಿ ನಡೆಯುವಂತೆ ಮಾಡಿದರು. ಇದನ್ನು ಪರ್ಯಾಯವೆಂದು ಕರೆಯಲಾಗುತ್ತದೆ. ಈ ಪರ್ಯಾಯ ಸಂಪ್ರದಾಯವು ಇಂದಿಗೂ ಕ್ರಮವತ್ತಾಗಿ ನಡೆಸಿಕೊಂಡುಬರಲಾಗುತ್ತಿದೆ. ನಾಲ್ಕನೆಯದಾಗಿ ಶ್ರೀ ಕೃಷ್ಣ ಮಠದ ಸಂಸ್ಕೃತ ಶಾಸನದಲ್ಲಿ ಕಳೆದ ಶತಮಾನದಲ್ಲಿ ಕೃಷ್ಣ ಮಠವು ಜೀರ್ಣೋದ್ಧಾರಗೊಂಡ ಉಲ್ಲೇಖವಿದೆ. ಒಟ್ಟಿನಲ್ಲಿ ಉಡುಪಿಯ ಶಾಸನಗಳಲ್ಲಿ ದೇವಾಲಯಗಳ ಜೀರ್ಣೋದ್ಧಾಕ್ಕೆ ಸಂಬಂದಿಸಿದಂತೆ ಹಲವು ಉಲ್ಲೇಖಗಳು ಕಂಡುಬರುತ್ತವೆ. ಉಡುಪಿಯ ದೇವಾಲಯಗಳಿಗೆ ಸಂಬಂದಿಸಿದಂತೆ ಅವುಗಳ ಸ್ಥಾಪನೆಯ ಕುರಿತಂತೆ ಅಧಾರಗಳು ಲಭ್ಯವಿಲ್ಲದಿದ್ದರೂಕೂಡ, ದೇವಾಲಯಗಳ ಜೀರ್ಣೋದ್ಧಾರ ಶಾಸನಗಳು ಮಹತ್ವದ ಮಾಹಿತಿಯನ್ನು ಒದಗಿಸುತ್ತವೆ. ಶ್ರೀಕೃಷ್ಣ ಮಠದ ಜೀರ್ಣೋದ್ಧಾರಕ್ಕೆ ರಾಜನಿಂದ ಮಾತ್ರವಲ್ಲದೆ ಖಾಸಗಿ ವ್ಯಕ್ತಿಗಳಿಂದಲೂ ದಾನರೂಪದ ಸಹಾಯ ಬಂದಿರುವುದು ತಿಳಿದುಬರುತ್ತದೆ.

**ಆಕರ ಗ್ರಂಥಗಳು**


- ಕೃಷ್ಣ ಭಟ್. ಎ. (ಸಂ.) (1977). ಸುದರ್ಶನ ಡಾ. ಮಾಧವ ಪೈ ಅಭಿನಂದನಾ ಗ್ರಂಥ. ಮುಲ್ಕಿ.
- ಮಂಜುನಾಥ್ ಸಿ.ಯು. (2012). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ.
- ಮುರಳೀಧರ ಉಪಾಧ್ಯ ಹಿರಿಯಡ್ಕ & ಪಿ. ಎನ್. ನರಸಿಂಹಮೂರ್ತಿ (ಸಂ.) ದಕ್ಷಿಣ ಕನ್ನಡದ ದೇವಾಲಯಗಳು. ಶ್ರೀ ಜನಾರ್ಧನ ಮತ್ತು ಮಹಾಕಾಳೀ ದೇವಸ್ಥಾನ, ಅಂಬಲಪಾಡಿ, ಉಡುಪಿ.
- ಶಾಸನ ಅಧ್ಯಯನ. ಸಂಪುಟ 2, ಸಂಚಿಕೆ 1, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- Branfoot, C. (2013). Remaking the past: Tamil sacred landscape and temple renovations. *Bulletin of the School of Oriental and African Studies*, *76*(1), 21–47. https://doi.org/10.1017/s0041977x12001462
- Rao. (n.d.). *Forgotten history and temples*. https://radha-travel-prayana.blogspot.com/2019/12/forgotten-history-and-temples.html